



ವೈದ್ಯ ವೈವಿಧ್ಯ

ಡಾ.ಎಚ್ ಎಸ್ ಮೋಹನ್
drhsmohan@gmail.com

# ಮಾಸ್ಕ್ ಹಿಂದಿನ ರೋಚಕ ಕತೆ

ಈಗಿನ ಕರೋನಾ ದೆಸೆಯಿಂದ ಫೇಸ್ ಮಾಸ್ಕ್ ನಮಗೆಲ್ಲಾ ಅನಿವಾರ್ಯ ವಾಗಿದೆ. ಆದರೆ ಅದು ಮೊದಲು ಆಪರೇಷನ್ ಕೊಠಡಿಗಳಲ್ಲಿ ಉಪಯೋಗಕ್ಕೆ ಬಂದ ಘಟನೆ ರೋಚಕವಾಗಿದೆ. 1902ರಲ್ಲಿ ಅಮೆರಿಕದ ಫಿಲಡೆಲ್ಫಿಯಾದ ಜೆಫರ್ಸನ್ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಆಪರೇಷನ್ ನಡೆಯುತ್ತಿತ್ತು. ರೋಗಿ ಆಪರೇಷನ್ ಟೇಬಲ್ ಮೇಲೆ ಮಲಗಿದ್ದನು. ಆತನ ಸುತ್ತಲೂ ಸರ್ಜನ್, ಅರಿವಳಿಕೆ ತಜ್ಞ ವೈದ್ಯರು ಹಾಗೂ ದಾದಿಯರು ನಿಂತಿದ್ದರು. ಆಪರೇಷನ್ ನಡೆಯುತ್ತಿತ್ತು. ಆಪರೇಷನ್ ಥಿಯೇಟರಿನ ಹಿಂಭಾಗದಲ್ಲಿ ಆಪರೇಷನ್ ವೀಕ್ಷಿಸಲು ಅನುಕೂಲವಾಗುವಂತೆ ಒಂದು ಕೊಠಡಿ ಇತ್ತು. ಅಲ್ಲಿ ಕೆಲವರು ಆಪರೇಷನ್ ನಡೆಯುವುದನ್ನು ನೋಡುತ್ತಿದ್ದರು. ಥಿಯೇಟರಿನಲ್ಲಿ ಸರ್ಜನ್, ದಾದಿಯರು ಯಾರೂ ಮಾಸ್ಕ್ ಧರಿಸಿರಲಿಲ್ಲ. ಕೈಗೆ ಗ್ಲೌಸ್ ಸಹಿತ ಹಾಕಿರಲಿಲ್ಲ. ಆಪರೇಷನ್ ವೀಕ್ಷಿಸುವ ಕೊಠಡಿಯಲ್ಲಿದ್ದ ವೈದ್ಯಕೀಯ ವಿದ್ಯಾರ್ಥಿಯೊಬ್ಬ ಆಪರೇಷನ್ ನಡೆಯುವುದನ್ನು ನೋಡುತ್ತಿರುವಾಗ ಒಂದು ರೋಚಕವಾದ ವಿಷಯವನ್ನು ಗಮನಿಸಿದ. ಆಪರೇಷನ್ ನಡೆಸುತ್ತಿದ್ದ ಸರ್ಜನ್ನರು ವೈದ್ಯಕೀಯ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಶಸ್ತ್ರಚಿಕಿತ್ಸೆಯ ವಿಚಾರವಾಗಿ ಮಾತನಾಡುತ್ತಿದ್ದರು. ಆಗ ಆ ವಿದ್ಯಾರ್ಥಿ ಅವರ ಬಾಯಿಯಿಂದ ಜೊಲ್ಲಿನ ಹನಿಗಳು ಹೊರಗೆ ಬರುವುದನ್ನು ಗಮನಿಸಿದ. ಈ ವಿಚಾರವನ್ನು ಆತ ತನ್ನ ಗುರುಗಳಾದ ವೈದ್ಯೆ ಡಾ. ಆ್ಯಲಿಸ್ ಹ್ಯಾಮಿಲ್ಟನ್‌ರಿಗೆ ತಿಳಿಸಿದ. ಆಕೆ ಆ ಬಗೆಗೆ ಒಂದು ವಿವರವಾದ ಸಂಶೋಧನೆಯನ್ನೇ ಕೈಗೊಂಡರು. ಆಕೆ ಶಸ್ತ್ರಚಿಕಿತ್ಸೆಯ ಮೇಜಿನ ಮೇಲೆ ಬ್ಯಾಕ್ಟೀರಿಯಾಗಳನ್ನು ಕಂಡು ಹಿಡಿಯಲು ಉಪಯೋಗಿಸುವ ಕಲ್ಚರ್ ತಟ್ಟೆಯನ್ನು ಇರಿಸಿದಳು. ಸರ್ಜನ್ನರು 500 ಶಬ್ದ ಮಾತಾಡಿದಾಗ ಸ್ಟ್ರೆಪ್ಟೋಕಾಕೈ, ಡಿಪ್ಲೋಕಾಕೈ, ಸ್ಟಫೈಲೋಕಾಕೈ ಹಾಗೂ ಇನ್ನಿತರ ಬ್ಯಾಕ್ಟೀರಿಯಾಗಳ 75 ಕಾಲೋನಿಗಳು ಕಂಡು ಬಂದವು. ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಬ್ಯಾಕ್ಟೀರಿಯಾಗಳು ಮನುಷ್ಯರಿಗೆ ರೋಗ ತರಬಲ್ಲ ಬ್ಯಾಕ್ಟೀರಿಯಾಗಳು. ಹೀಗೆ ಸರ್ಜನ್ ಮಾತನಾಡುವಾಗ 24 ಸೆ.ಮೀ. ವರೆಗೆ ಉಗುಳು ಹನಿಗಳು ಹಾಗೂ ಅವರು ಕೆಮ್ಮಿದರೆ 36 ಸೆ. ಮೀ. ವರೆಗೆ ಈ ಹನಿಗಳು ಹರಡುತ್ತಿದ್ದವು. ಹಾಗಾಗಿ ಈ ರೀತಿಯ ಉಗುಳು ಅಥವಾ ಜೊಲ್ಲಿನ ಹನಿಗಳು ಶಸ್ತ್ರಚಿಕಿತ್ಸೆಯ ರೋಗಿಗಳ ಗಾಯಗಳ ಸೋಂಕಿಗೆ ಕಾರಣವಾಗುತ್ತವೆ ಎಂದು ಆಕೆ ಕೊನೆಯಲ್ಲಿ ಅಭಿಪ್ರಾಯಪಟ್ಟಳು.

ಈ ಬಗೆಗೆ ಸಂಶೋಧನಾ ಪ್ರಬಂಧವನ್ನು ಆಕೆ 1905ರಲ್ಲಿ ಅಮೆರಿಕದ ಪ್ರಸಿದ್ಧ ವೈದ್ಯಕೀಯ ಜರ್ನಲ್ 'ಜರ್ನಲ್ ಆಫ್ ಅಮೆರಿಕನ್ ಮೆಡಿಕಲ್ ಅಸೋಸಿಯೇಶನ್'ನಲ್ಲಿ ಪ್ರಕಟಿಸಿದಳು. ಹಾಗಾಗಿ ಆಪರೇಷನ್ ಥಿಯೇಟರ್‌ನಲ್ಲಿರುವ ಸರ್ಜನ್, ದಾದಿಯರು ಹಾಗೂ ಎಲ್ಲರೂ ಮುಖಕ್ಕೆ ಮಾಸ್ಕ್ ಧರಿಸಬೇಕೆಂದು ಸಲಹೆ ಕೊಟ್ಟಳು. ಮುಂದಿನ 8 ತಿಂಗಳುಗಳಲ್ಲಿ ಅಲ್ಲಿನ ಆಪರೇಷನ್ ಥಿಯೇಟರ್‌ನಲ್ಲಿ ಒಳಹೋಗುವ ಎಲ್ಲರೂ ಮಾಸ್ಕ್ ಧರಿಸುತ್ತಿದ್ದರಿಂದ ಸೋಂಕಿನ ಪ್ರಮಾಣ ತೀರಾ ಕಡಿಮೆಯಾಗಿದ್ದು ಗಮನಕ್ಕೆ ಬಂದಿತು.

1910–11ರಲ್ಲಿ ಮಂಚೂರಿಯಾದಲ್ಲಿ ನ್ಯುಮೋನಿಕ್ ಪ್ಲೇಗ್‌ನ ಸಾಂಕ್ರಾಮಿಕ ಹರಡಿತು. ಈ ಸಾಂಕ್ರಾಮಿಕದಲ್ಲಿ 50,000ಕ್ಕಿಂತ ಹೆಚ್ಚು ಜನರು ಮರಣ ಹೊಂದಿದರು. ಈ ಪ್ಲೇಗ್ ಸಾಂಕ್ರಾಮಿಕ ಇಲಿಗಳಿಂದ ಅಥವಾ ಚಿಗಟಗಳಿಂದ ಹಬ್ಬಲಿಲ್ಲ. ಆದರೆ ಗಾಳಿಯಲ್ಲಿ ಹರಡಿದ ಕಣಗಳಿಂದ ಹರಡಿತು. ಹಾಗಾಗಿ ಜನರೆಲ್ಲರೂ ಮುಖಕ್ಕೆ ಮಾಸ್ಕ್ ಧರಿಸಬೇಕೆಂದು ಕಡ್ಡಾಯ ಮಾಡಲಾಯಿತು.

1918ರ ಸ್ಪಾನಿಷ್ ಫ್ಲೂ ಸಾಂಕ್ರಾಮಿಕದಲ್ಲಿ ಹಲವಾರು ಮಿಲಿಯನ್ ಜನರು ಮರಣ ಹೊಂದಿದರು. ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋ ದಲ್ಲಿ ಜನರಿಗೆ ಮಾಸ್ಕ್ ಧರಿಸುವಂತೆ ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಕಠಿಣವಾದ ಕಾನೂನು ಮಾಡಲಾಯಿತು. ಹಾಗಾಗಿ ಅಲ್ಲಿ 20,000 ಜನರಿಗೆ ಫ್ಲೂ ಬಂದರೂ ಮರಣ ಹೊಂದಿದವರ ಸಂಖ್ಯೆ 1500ರ ಒಳಗೇ ಇತ್ತು. 1918–19ರಲ್ಲಿ ಅಮೆರಿಕದ ನ್ಯೂಯಾರ್ಕ್‌ನಿಂದ ಇಂಗ್ಲೆಂಡಿನ ಸೌತಾಂಪ್ಟನ್‌ಗೆ ಒಂದು ಹಡಗು ಪ್ರಯಾಣ ಮಾಡಿತು. ಆಗ ಅದರಲ್ಲಿ ಯಾರೂ ಮಾಸ್ಕ್ ಧರಿಸಿರಲಿಲ್ಲ. ಸುಮಾರು 100 ಜನರಿಗೆ ಫ್ಲೂ ಸೋಂಕು ಬಂದಿತು. ಹಡಗು ವಾಪಸ್ ಬರುವಾಗ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಿದ್ದರಿಂದ ಯಾರಲ್ಲಿಯೂ ಸೋಂಕು ಕಂಡುಬರಲಿಲ್ಲ.

ಹಾಗಾಗಿ ಈ ಸುಲಭ ವಿಧಾನದಿಂದ ಹೇಗೆ ನಾವು ಸೋಂಕಿನ ಪ್ರಮಾಣವನ್ನು ತಡೆಗಟ್ಟಬಹುದು ಎಂದು ತಿಳಿಯಬಹುದು. ಈಗಿನ ಕೋವಿಡ್ 19 ಸಾಂಕ್ರಾಮಿಕದಲ್ಲೂ ಈ ಮಾಸ್ಕ್ ಸೋಂಕು ಹರಡುವುದನ್ನು ಬಹಳಷ್ಟು ನಿಯಂತ್ರಿಸುತ್ತಿದೆ. ಈಗ ನಾವು ಈ ಮಾಸ್ಕ್‌ನ ಇನ್ನೂ ಹಳೆಯ ಚರಿತ್ರೆಯ ಬಗೆಗೆ ಒಂದು ನೋಟ ಹರಿಸೋಣ. ಈ ಬಗೆಗೆ ನಮಗೆ ಮೊಟ್ಟಮೊದಲ ದಾಖಲೆ ಸುಮಾರು ಕ್ರಿ.ಪೂ. 6ನೆಯ ಶತಮಾನದಲ್ಲಿಯೇ ಲಭ್ಯವಾಗುತ್ತದೆ. ಮುಖದ ಮೇಲೆ ಬಟ್ಟೆ ಸುತ್ತಿಕೊಂಡಿರುವ ಚಿತ್ರಗಳು ಪರ್ಶಿಯಾದ ಗೋರಿಗಳ ಬಾಗಿಲಿನಲ್ಲಿ ದೊರೆಯುತ್ತವೆ. ಈಗಿನ ಮುಖದ ಮಾಸ್ಕ್ ದೇವಿ ತರಹದ ಆಕಾರದ ಬಟ್ಟೆಗಳನ್ನು ಸುತ್ತಿಕೊಂಡ ದಾಖಲೆ ಚೀನಾದಲ್ಲಿ ದೊರಕುತ್ತದೆ. ಯುವಾನ್ ರಾಜಮನೆತನದ (1279–1368) ಸ್ತ್ರೀಯರು ಮುಖದ ಮೇಲೆ ರೇಷ್ಮೆ ವಸ್ತ್ರವನ್ನು ಮಾಸ್ಕ್ ರೀತಿ ಸುತ್ತಿಕೊಳ್ಳುತ್ತಿದ್ದರು. 14ನೆಯ ಶತಮಾನದಲ್ಲಿ ಕರಿಯ ಮರಣ ಎಂಬ ಸಾಂಕ್ರಾಮಿಕ ಯುರೋಪಿಗೆ ದಾಳಿ ಇಟ್ಟಿತು. ಆಗ ಈ ರೀತಿಯ ಮಾಸ್ಕ್‌ಗಳು ಉಪಯೋಗ ವಾದವು ಎನ್ನಲಾಗಿದೆ. 16ನೆಯ ಶತಮಾನದಲ್ಲಿ ಫ್ರೆಂಚ್ ವೈದ್ಯ ಡಾ. ಚಾರ್ಲ್ಸ್ ಡಿ ಲೋರ್ಮೆ ಎಂಬಾತ ಮುಖದ ಮೇಲೆ ಹಕ್ಕಿಯ ಮೂತಿಯ ಆಕಾರದ ಮಾಸ್ಕ್ ರೂಪಿಸಿದ. ಅದರಲ್ಲಿ ಕಣ್ಣಿನ ಜಾಗಕ್ಕೆ ಬೇಕಾದ ಸಾಕೆಟ್ ಇಡಲಾಗಿತ್ತು. ಸಾಂಕ್ರಾಮಿಕದ ರೋಗಿಗಳ ವಾಸನೆ ತಪ್ಪಿಸಲು ಪುದಿನ, ಕರ್ಪೂರ ಈ ತರಹದ ಸುವಾಸನೆ ವಸ್ತುಗಳನ್ನು ಮತ್ತೊಂದು ಭಾಗದಲ್ಲಿ ಇರಿಸಿ ಅವುಗಳ ಸುವಾಸನೆ ಬರುವಂತೆ ರೂಪಿಸಿದ್ದ. ಅದರ ಜೊತೆಗೆ ತಲೆಗೆ ಹ್ಯಾಟ್ ರೋಬ್, ಕೈ ಗ್ಲೌಸ್‌ಗಳು, ಶೂಗಳು, ವಾಕಿಂಗ್ ಸ್ಟಿಕ್ – ಹೀಗೆ ಒಂದು ಇಡೀ ಸೆಟ್ ಬೀಕ್ ಸೂಟ್ ರೂಪಿಸಿದ್ದ. ನಂತರ ಆ ಸಮಯದಲ್ಲಿ ಪ್ಲೇಗ್ ಸಾಂಕ್ರಾಮಿಕ ವಿಪರೀತ ಇದ್ದದ್ದರಿಂದ ಆ ಸೂಟ್ ಒಂದು ಸಾವಿನ ಗುರುತು ಆಗಿ ಪರಿಣಮಿಸಿತು.

ಅದೇ ಶತಮಾನದಲ್ಲಿ ಪ್ರಖ್ಯಾತ ಕಲಾವಿದ ಲಿಯೋನಾರ್ಡೋ ಡ ವಿಂಚಿ ನೀರಿನಲ್ಲಿ ಮುಳುಗಿಸಿ ನಂತರ ಮುಖದ ಮೇಲೆ ಹಾಕುವ ಬಟ್ಟೆಯನ್ನು ಉಪಯೋಗಿಸತೊಡಗಿದ. ಅದು ಜನರ ಉಸಿರಿನಿಂದ ಬರುವ ವಿಷಪೂರಿತ ರಾಸಾಯನಿಕಗಳನ್ನು ಫಿಲ್ಟರ್ ಮಾಡುತ್ತದೆ ಎನ್ನಲಾಗಿದೆ. ಈ ರೀತಿಗೆ ಹತ್ತಿರದ ಒಂದು ವ್ಯವಸ್ಥೆ ಈಗಲೂ ಬೆಂಕಿ ಅನಾಹುತಗಳನ್ನು ತಪ್ಪಿಸಿಕೊಳ್ಳಲು ಉಪಯೋಗಿಸಲಾಗುತ್ತಿದೆ.




**ಆಧುನಿಕ ಬೆಳವಣಿಗೆಗಳು:** 19ನೆಯ ಶತಮಾನದಲ್ಲಿ ಮಾಸ್ಕ್‌ನ ರೂಪುರೇಷೆಯಲ್ಲಿ ಗಮನಾರ್ಹ ಬದಲಾ ವಣೆ ಕಂಡು ಬಂದಿತು. 1827ರಲ್ಲಿ ಸ್ಕಾಟಿಷ್ ವಿಜ್ಞಾನಿ ರಾಬರ್ಟ್ ಬ್ರೌನ್ 'ಬ್ರೌನ್‌ನ ಚಲನೆ' ಎಂಬ ಹೊಸ ವಿಷಯವನ್ನು ಹೊರಗೆಡಹಿದ. ಧೂಳಿನ ಕಣಗಳಿಂದ ಈ ಮಾಸ್ಕ್‌ಗಳು ರಕ್ಷಣೆ ಕೊಡುವುದನ್ನು ಆತ ಸಾಬೀತು ಪಡಿಸಿದ. 1848ರಲ್ಲಿ ಅಮೆರಿಕದ ಲೂಯಿಸ್ ಹಾಸ್ಲೆ ಎಂಬಾತ ಗಣಿಯ ಕೆಲಸಗಾರರಿಗೆ ಮಾಸ್ಕ್ ರೂಪಿಸಿದ. ಅಲ್ಲದೆ ಆತ ಅದಕ್ಕೆ ಪೇಟೆಂಟ್ ದೊರಕಿಸಿಕೊಂಡು ಇತಿಹಾಸ ನಿರ್ಮಿಸಿದ. 1861ರಲ್ಲಿ ಫ್ರೆಂಚ್ ಮೈಕ್ರೋ ಬಯಾಲಜಿಸ್ಟ್ ಲೂಯಿಸ್ ಪಾಶ್ಚರ್ ಗಾಳಿಯಲ್ಲಿ ಬ್ಯಾಕ್ಟೀರಿಯಾಗಳ ಇರುವಿಕೆಯನ್ನು ಬಹಿರಂಗ ಪಡಿಸಿದ ಮೇಲೆ ಮಾಸ್ಕ್‌ಗಳ ಬಗೆಗೆ ಜನರು ಹೆಚ್ಚು ಆಸಕ್ತಿ ತಳೆದರು. 1899ರಲ್ಲಿ ಫ್ರೆಂಚ್ ಡಾಕ್ಟರ್ ಒಬ್ಬರು ಹತ್ತಿಯಿಂದ ಮಾಡಿದ 6 ಪದರುಗಳ ಮಾಸ್ಕ್ ರೂಪಿಸಿ ಆಪರೇಷನ್ ಗೌನ್‌ನ ಮೇಲ್ಭಾಗದಲ್ಲಿ ಹೊಲಿದು ಕೊಂಡರು. ಅದನ್ನು ಉಪಯೋಗಿಸ ಬೇಕಾದಾಗ ಕಾಲರ್ ಮೇಲೆ ಬರುವಂತೆ ಮಾಡುತ್ತಿದ್ದರು. ಅದು ನಿಧಾನವಾಗಿ ಬೇರೆ ಬೇರೆ ರೂಪ ತಳೆದು ಆಧುನಿಕ ಮಾಸ್ಕ್ ರೂಪುಗೊಳ್ಳುವುದಕ್ಕೆ ಮೂಲ ಕಾರಣ ವಾಯಿತು.

ಈ ಕಡೆ ಚೀನಾದಲ್ಲಿ ಕ್ವಿಂಗ್ ರಾಜಮನೆತನದ (1644– 1911) ಕಾಲದಲ್ಲಿ ಚೀನಾದ ವೈದ್ಯ ವಿಜ್ಞಾನಿ ಊ ಲಿಯಂಡೆ ಎಂಬಾತ ಹತ್ತಿಯ ಗಾಜ್‌ನ ಎರಡು ಪದರದ ಮಾಸ್ಕ್ ರೂಪಿಸಿ ಅದಕ್ಕೆ ವೂನ ಮಾಸ್ಕ್ ಎಂದು ಹೆಸರು ಕೊಟ್ಟ. ಆಗ ಚೀನಾದ ಉತ್ತರ ಭಾಗದಲ್ಲಿ ಬಹಳಷ್ಟು ಪ್ಲೇಗ್‌ನ ಹಾವಳಿ ಇತ್ತು. ಈ ಮಾಸ್ಕ್ ಹೆಚ್ಚಿನ ಎಲ್ಲಾ ದೇಶದ ತಜ್ಞರುಗಳಿಂದ ಬಹಳ ಹೊಗಳಿಕೆಗೆ ಒಳಗಾಗಿತ್ತು. ಏಕೆಂದರೆ ಅದನ್ನು ತಯಾರಿಸುವುದು ಸುಲಭ ಮತ್ತು ಬೆಲೆಯೂ ಕಡಿಮೆ. ಮತ್ತು ಅದಕ್ಕೆ ಬೇಕಾದ ಪರಿಕರವು ಎಲ್ಲಾ ಕಡೆ ಲಭ್ಯವಿತ್ತು.

ನಂತರ ಬಹಳಷ್ಟು ಸಾಂಕ್ರಾಮಿಕ ಕಾಯಿಲೆಗಳು, ಫ್ಲೂ ಸಾಂಕ್ರಾಮಿಕ ಮತ್ತು ಕೈಗಾರಿಕೋದ್ಯಮಗಳಲ್ಲಿ ಹೊಗೆ ಧೂಳು ಈ ಎಲ್ಲವುಗಳ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಮಾಸ್ಕ್‌ಗಳು ಬಗೆಬಗೆಯ ರೂಪ ಆಕಾರಗಳನ್ನು ಪಡೆದವು. 2003ರಲ್ಲಿ ಸಾರ್ಸ್ ಸಾಂಕ್ರಾಮಿಕದ ಸಮಯದಲ್ಲಿ ಈ ಮಾಸ್ಕ್‌ಗಳು ಚೀನಾದಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಉಪಯೋಗ ವಾದವು. 2012ರಲ್ಲಿ ಚೀನಾದಲ್ಲಿ ವಾತಾವರಣದಲ್ಲಿನ ಕೆಟ್ಟ ಗಾಳಿ ಮತ್ತು ಕಲ್ಮಶಗಳನ್ನು ತಡೆಯಲು ಸಹಿತ ಗರಿಷ್ಠ ಸಂಖ್ಯೆಯ ಮಾಸ್ಕ್‌ಗಳು ಉಪಯೋಗ ವಾದವು. ಅದೇ ವರ್ಷ ಮಾಸ್ಕ್‌ಗಳು ಆಧುನಿಕ ಗೊಂಡು ಪಿಎಂ 2.5 ರೀತಿ ಜನರಿಗೆ ಅರಿವಿಗೆ ಬಂದು *N* 95 ಮತ್ತು *KN* 90 ಎಂಬ ಮಾಸ್ಕ್‌ಗಳು ಜನಪ್ರಿಯವಾದವು. ಇವು ಗಾಳಿಯ ಕಣಗಳನ್ನು ಫಿಲ್ಟರ್ ಮಾಡುವ ಶಕ್ತಿಯನ್ನು ಹೊಂದಿವೆ.

**ವೈದ್ಯಕೀಯ ಮಾಸ್ಕ್‌ಗಳ ಬೆಳವಣಿಗೆ:** ವೈದ್ಯಕೀಯ ಉದ್ದೇಶಕ್ಕೆ ಅಲ್ಲದ ಮಾಸ್ಕ್‌ಗಳು ಮನುಷ್ಯನ ಗುರುತು ಮರೆಸಲು, ನಾಟಕಗಳಲ್ಲಿ, ಕೆಲವೊಮ್ಮೆ ಮಹಿಳೆಯರಲ್ಲಿ – ಹೀಗೆ ಉಪಯೋಗವಾಗುತ್ತಿದ್ದವು. ಆದರೆ ವೈದ್ಯಕೀಯ ಮಾಸ್ಕ್‌ನ ಮುಖ್ಯ ಉದ್ದೇಶ ವ್ಯಕ್ತಿಯ ರಕ್ಷಣೆ.

**17ನೆಯ ಶತಮಾನದ ಯುರೋಪಿನಲ್ಲಿ:** ಪ್ಲೇಗ್ ಚಿಕಿತ್ಸೆ ಮಾಡುವ ವೈದ್ಯರುಗಳು ಮೊದಲು ತಿಳಿಸಿದ ಬೀಕ್ ಸೂಟ್ ರೀತಿಯ ಧಿರಿಸುಗಳನ್ನು ಧರಿಸುತ್ತಿದ್ದರು. 19ನೆಯ ಶತಮಾನದಲ್ಲಿ ಫ್ಯಾಷನ್ ಮಾಡುವ ಮಹಿಳೆಯರು ಧೂಳಿನಿಂದ ರಕ್ಷಣೆ ಪಡೆಯಲು ಮುಖದ ಮೇಲೆ ಪರದೆ ರೀತಿಯದನ್ನು ತೊಡುತ್ತಿದ್ದರು. ನಂತರ ಮೈಕ್ರೋ ಜೀವಿಗಳ ಬಗ್ಗೆ ತಿಳಿವಳಿಕೆ ಬರಲಾರಂಭಿಸಿದಾಗ ಫ್ಯಾಷನ್ ಹೋಗಿ ವೈದ್ಯಕೀಯ ಉದ್ದೇಶಗಳು ಮುನ್ನೆಲೆಗೆ ಬಂದವು. ಮೈಕ್ರೋಸ್ಕೋಪ್ ಉಪಯೋಗಿಸಿದಾಗ ಧೂಳಿನ ಕಣಗಳಲ್ಲೂ ಬ್ಯಾಕ್ಟೀರಿಯಾಗಳ ಇರುವಿಕೆ ಗೊತ್ತಾದಾಗ ವೈದ್ಯಕೀಯದ ಮಾಸ್ಕ್‌ಗಳಿಗೆ ಮಹತ್ವ ಜಾಸ್ತಿಯಾಯಿತು.

**20ನೆಯ ಶತಮಾನ:** 1897ರಲ್ಲಿ ಶಸ್ತ್ರಕ್ರಿಯೆಯ ಸಂದರ್ಭದಲ್ಲಿ ಮಾಸ್ಕ್ ಉಪಯೋಗಿಸಲಾಯಿತು ಎಂದಿದ್ದರೂ ಅದು ಎಲ್ಲ ಕಡೆಗೆ ಬಳಕೆಗೆ ಬರುವುದು ತಡವಾಯಿತು. 1902ರಲ್ಲಿ ನಿಜವಾಗಿ ಅದು ಬಳಕೆಗೆ ಬರಲು ಒಬ್ಬ ವೈದ್ಯಕೀಯ ವಿದ್ಯಾರ್ಥಿ ಆಪರೇಷನ್ ಥಿಯೇಟರ್‌ನಲ್ಲಿ ಸರ್ಜನ್‌ರ ಬಾಯಿಯಿಂದ ಹೊರ ಬರುತ್ತಿದ್ದ ಜೊಲ್ಲಿನ ಕಣಗಳನ್ನು ನೋಡಿದ ಬಗೆಗೆ ಲೇಖನದ ಆರಂಭದಲ್ಲಿ ತಿಳಿಸಲಾಗಿದೆ. ಅದನ್ನು ಆತ ತನ್ನ ಗುರುಗಳಾದ ಆ್ಯಲಿಸ್ ಹ್ಯಾಮಿಲ್ಟನ್‌ಗೆ ತಿಳಿಸಿ, ಆಕೆ ಅದನ್ನು ದೃಢೀಕರಿಸಲು ಹಲವು ಪ್ರಯೋಗಗಳನ್ನು ಮಾಡಿದ ಬಗ್ಗೆಯೂ ತಿಳಿಸಲಾಗಿದೆ.

1910ರಲ್ಲಿ ಮಂಚೂರಿಯಾದಲ್ಲಿ ಕಂಡು ಬಂದ ನ್ಯುಮೋನಿಕ್ ಪ್ಲೇಗ್ ಸಾಂಕ್ರಾಮಿಕದ ಸಂದರ್ಭದಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ವೈದ್ಯ ವೂಲಿಯಾಂಡೆ ಎಂಬಾತ ಪ್ಲೇಗ್ ವಿರುದ್ಧ ಹೋರಾಡುವ ಮಂಡಳಿಗೆ ಚೀನಾದ ಕೋರ್ಟ್‌ನಿಂದ ನಿಯುಕ್ತನಾದ. ಆತ ಆ ಸಾಂಕ್ರಾಮಿಕ ಗಾಳಿಯಲ್ಲಿ ಹರಡುತ್ತಿದೆ ಎಂದು ವಾದಮಾಡಿ ಎಲ್ಲಾ ವೈದ್ಯಕೀಯ ಸಿಬ್ಬಂದಿಗಳಿಗೆ ಮಾಸ್ಕ್ ಧರಿಸುವುದನ್ನು ಕಡ್ಡಾಯ ಗೊಳಿಸಿದ. 1918ರ ಸ್ಪಾನಿಷ್ ಫ್ಲೂ ಸಾಂಕ್ರಾಮಿಕದ ಹೊತ್ತಿಗೆ ಎಲ್ಲಾ ವೈದ್ಯಕೀಯ ಸಿಬ್ಬಂದಿ ಮಾಸ್ಕ್ ಧರಿಸುವುದು ಕಡ್ಡಾಯವೆನಿಸಿ ನಂತರ ಅದು ಎಂದಿನ ಪದ್ಧತಿಯಾಗಿ ಮಾರ್ಪಾಡಾಯಿತು.

ಇದೇ ಸಂದರ್ಭದಲ್ಲಿ ಸಿಯಾಟೆಲ್‌ನಲ್ಲಿ ರಸ್ತೆಯ ಮೇಲೆ ಚಲಿಸುವ ಸ್ಟ್ರೀಟ್ ಕಾರಿನಲ್ಲಿ ಪ್ರಯಾಣಿಸುವ ಎಲ್ಲರಿಗೆ ಮಾಸ್ಕ್ ಅಗತ್ಯವಿದ್ದದ್ದರಿಂದ ಸ್ಥಳೀಯ ರೆಡ್ ಕ್ರಾಸ್ ಸಂಸ್ಥೆಯು 120 ಜನರಿಗೆ 3 ದಿನಗಳಲ್ಲಿ 2,60,000 ಮಾಸ್ಕ್‌ಗಳನ್ನು ತಯಾರಿಸಿಕೊಟ್ಟದ್ದು ಒಂದು ದೊಡ್ಡ ದಾಖಲೆ. 1920ರ ಹೊತ್ತಿಗೆ ಆಪರೇಷನ್ ಥಿಯೇಟರ್‌ನಲ್ಲಿ ಎಲ್ಲರೂ ಮಾಸ್ಕ್ ಧರಿಸುವ ಪದ್ಧತಿ ತೀರಾ ಸಾಮಾನ್ಯ ಪದ್ಧತಿಯಾಗಿ ರೂಪುಗೊಂಡಿತು.

**ಎರಡನೇ ಮಹಾಯುದ್ಧದ ನಂತರ:** ಲಂಡನ್‌ನಲ್ಲಿ ವಾಯು ಮಾಲಿನ್ಯ ತುಂಬಾ ಜಾಸ್ತಿಯಾಗಿ ಬ್ರಿಟನ್‌ನಲ್ಲಿ ಸ್ಮಾಗ್ ಮಾಸ್ಕ್‌ಗಳನ್ನು ಉಪಯೋಗಿಸುವುದು ರೂಢಿಯಾಯಿತು. ಅದು ನಂತರ ಭಾರತ, ಚೀನಾ ಹಾಗೂ ಇನ್ನೂ ಹಲವು ದೇಶಗಳಲ್ಲೂ ಮಾಸ್ಕ್ ಧರಿಸುವುದು ರೂಢಿಯಾಯಿತು. ಚೀನಾದಲ್ಲಿ ವಾಯು ಮಾಲಿನ್ಯಕ್ಕಾಗಿ ಮಾತ್ರವಲ್ಲದೆ ಒಂದು ರೀತಿಯ ಫ್ಯಾಷನ್‌ಗಾಗಿ ಮಾಸ್ಕ್ ಬಳಕೆ. ಅದರಲ್ಲಿಯೂ ಮಹಿಳೆಯರಲ್ಲಿ ಜಾಸ್ತಿಯಾಯಿತು. ಈಗಿನ ಕರೋನಾ ವೈರಸ್ ಹಾವಳಿಯಲ್ಲಿ ವಿಶ್ವದಾದ್ಯಂತ ಈ ಮಾಸ್ಕ್ ಎಲ್ಲಾ ದೇಶಗಳಲ್ಲಿಯೂ ಬಳಕೆಯಾಗುತ್ತಿದೆ.

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹ

ತಂದೆಯ ಆಸ್ತಿಯಲ್ಲಿ ಮಗಳಿಗೂ ಸಮಾನ ಆಸ್ತಿ ಹಂಚಿಕೆ ಆಗಬೇಕು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದರಿಂದ ಹೆಣ್ಣುಮಕ್ಕಳ ಭವಿಷ್ಯಕ್ಕೆ ರಕ್ಷಣೆ ದೊರೆತಂತಾಗಿದೆ. ಅವಿಭಕ್ತ ಕುಟುಂಬದ ಹೆಣ್ಣುಮಕ್ಕಳಿಗೆ ಹಿಂದೂ ಉತ್ತರಾಧಿಕಾರ (ತಿದ್ದುಪಡಿ) ಕಾಯ್ದೆ ಪ್ರಕಾರ, ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕುಗಳಿವೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿರುವುದು ಸ್ವಾಗತಾರ್ಹವಾಗಿದೆ. ತಿದ್ದುಪಡಿ ಕಾಯ್ದೆ ಜಾರಿಗೆ ಬರುವ ಮುನ್ನ ಒಂದು ವೇಳೆ ತಂದೆ ತೀರಿಕೊಂಡಿದ್ದರೂ ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣುಮಕ್ಕಳು ಸಮಾನ ಹಕ್ಕು ಹೊಂದಿರುತ್ತಾರೆ. 2005ರಲ್ಲಿ ಕಾಯ್ದೆಗೆ ತರಲಾದ ತಿದ್ದುಪಡಿಯು ಪೂರ್ವಾನ್ವಯ ಆಗಲಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿರುವುದು ಸೂಕ್ತವಾಗಿದೆ. ಕಾಯ್ದೆಯು ತಿದ್ದುಪಡಿಗೊಂಡು ಜಾರಿಗೆ ಬಂದ ನಂತರ ಅಥವಾ ಅದಕ್ಕೂ ಮೊದಲೇ ಜನಿಸಿದ ಗಂಡು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿ ಮೇಲೆ ಯಾವ ಹಕ್ಕುಗಳಿವೆಯೋ ಅವೇ ಹಕ್ಕುಗಳು ಹೆಣ್ಣುಮಕ್ಕಳಿಗೂ ಇವೆ' ಎಂದು ನ್ಯಾಯಪೀಠ ಹೇಳಿದೆ. ಮಗಳು ಸದಾ ಮಗಳಾಗಿಯೇ ಇರುತ್ತಾಳೆ. ಆದರೆ, ಮಗ ಮದುವೆ ಆಗುವವರೆಗೆ ಮಾತ್ರ ಮಗನಾಗಿ ಇರುತ್ತಾನೆ ಎಂದು ಕೋರ್ಟ್ ಹೇಳಿದೆ. ಈ ಹಿಂದೆ ಎರಡು ನ್ಯಾಯಪೀಠಗಳು ಭಿನ್ನ ತೀರ್ಪು ನೀಡಿದ್ದರಿಂದ ಹಿಂದೂ ಉತ್ತರಾಧಿಕಾರ ಕಾಯ್ದೆಯ ವಿಚಾರದಲ್ಲಿ ಗೊಂದಲ ಸೃಷ್ಟಿಯಾಗಿತ್ತು. ಈ ಗೊಂದಲದಿಂದಾಗಿ ಹೈಕೋರ್ಟ್ ಮತ್ತು ಕೆಳ ನ್ಯಾಯಾಲಯಗಳಲ್ಲಿ ಹಲವು ಪ್ರಕರಣಗಳು ಬಾಕಿ ಇವೆ. ಈ ಪ್ರಕರಣಗಳ ತೀರ್ಪು ಈಗಾಗಲೇ ವಿಳಂಬ ಆಗಿದೆ. ಹಾಗಾಗಿ, ಆರು ತಿಂಗಳೊಳಗೆ ಈ ಎಲ್ಲ ಪ್ರಕರಣಗಳನ್ನು ಇತ್ಯರ್ಥ ಮಾಡಬೇಕು ಎಂದೂ ಪೀಠವು ಸೂಚಿಸಿರುವುದು ಮಹತ್ವದ ತೀರ್ಪಾಗಿದೆ.



–ಬಿ.ಆರ್. ಸಂತೋಷ ಜಾಬೀನ್ ಸುಲೇಪೇಟ

### ಸ್ವಾಗತಾರ್ಹ ಬೆಳವಣಿಗೆ

ಐತಿಹಾಸಿಕ ವಿವಾದಾತ್ಮಕ ವ್ಯಕ್ತಿ ಟಿಪ್ಪು ಸುಲ್ತಾನ್‌ನನ್ನು ಏಳನೇ ತರಗತಿಯ ಪಠ್ಯದಿಂದ ಕೈಬಿಟ್ಟಿರುವುದು ನಿಜಕ್ಕೂ ಸ್ವಾಗತರ್ಹವಾದ ಕ್ರಮ. ಇತಿಹಾಸವನ್ನು ಅರ್ಧಸತ್ಯವನ್ನು ಮುಚ್ಚಿಟ್ಟು ಸಾಮಾಜಿಕ ಸಾಮರಸ್ಯ ಮುಂದಿಟ್ಟುಕೊಂಡು ಟಿಪ್ಪು ಸುಲ್ತಾನ್‌ನನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸುತ್ತ ಮಕ್ಕಳಿಗೆ ಬೋಧಿಸಲಾಗುತ್ತಿತ್ತು. ಮೈಸೂರು ಅರಸರಿಂದ ಆಡಳಿತವನ್ನು ಕಸಿದು ಅವರನ್ನು ಬದಿಗೆ ತಳ್ಳಿ, ಸಾಮಾನ್ಯ ಕುದುರೆ ದಳದ ನಾಯಕನಾಗಿದ್ದ ಹೈದರ್ ಅಲಿ ಮೈಸೂರು ಸಿಂಹಾಸನವನ್ನು ಅಲಂಕರಿಸುತ್ತಾನೆ. ಆತನ ಮಗ ಟಿಪ್ಪು ಸಹ ಅದೇ ದಾರಿಯನ್ನು ಅನುಸರಿಸಿದವ. ಇದನ್ನು ಪಠ್ಯದಲ್ಲಿ ಹೇಳಲಾಗಿಲ್ಲ. ಕೊಡವರನ್ನು ಬಲವಂತವಾಗಿ ಮತಾಂತರಮಾಡಿದ್ದು, ಮೇಲುಕೋಟೆ ಅಯ್ಯಂಗಾರಮೇಲೆ ಬಲಾತ್ಕಾರ ಮಾಡಿದ್ದು, ಮಂಗಳೂರು ಕ್ರಿಶ್ಚಿಯನ್ನರ ಮಾರಣಹೋಮ ಮಾಡಿದ್ದು ಪಠ್ಯದಲ್ಲಿ

ಯಾವುದನ್ನೂ ಹೇಳಲಾಗಿಲ್ಲ. ಟಿಪ್ಪು ಸುಲ್ತಾನ್ ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸಲು ವಿಷಯ ಎಷ್ಟು ಬೇಕೊ ಅಷ್ಟನ್ನು ಮಾತ್ರ ಪಠ್ಯವಾಗಿ ಮಾಡಲಾಗಿತ್ತು. ಇತಿಹಾಸ ಸತ್ಯ ಮುಚ್ಚಿಟ್ಟು ಟಿಪ್ಪು ಸುಲ್ತಾನ್‌ನನ್ನು ಸ್ವಾತಂತ್ರ್ಯ ಹೋರಾಟಗಾರ ಎನ್ನುವುದೇಕೆ? ಇದು ಸಾಮಾಜಿಕ ಸಾಮರಸ್ಯದ ನೆಪವೊಡ್ಡಿ ಸತ್ಯಕ್ಕೆ ಮಾಡುವ ಅಪಚಾರಮಾಡಿದಂತಾಗುತ್ತದೆ. ಅಲ್ಲದೇ ಮೊದಲ ಸ್ವಾತಂತ್ರ್ಯ ಸಂಗ್ರಾಮ ನಡೆದದ್ದು 1857ರಲ್ಲಿ, ಆದರೆ ಟಿಪ್ಪು ಸುಲ್ತಾನ್ ಮರಣಹೊಂದಿದ್ದು 1799 ರಲ್ಲಿ. ಕೇವಲ ಬ್ರಿಟಿಷ್ ವಿರುದ್ಧ ಹೋರಾಡಿದ್ದಕ್ಕಾಗಿ ಆತನನ್ನು ಸ್ವಾತಂತ್ರ್ಯ ಹೋರಾಟಗಾರ ಎನ್ನಲಾಗುವುದಿಲ್ಲ, ಆತ ಬ್ರಿಟಿಷರಿಂದ ರಾಜ್ಯವನ್ನು ಉಳಿಸಿಕೊಳ್ಳಲು ಹೋರಾಡಿದ ಹೊರತು ಭಾರತವನ್ನು ಸ್ವಾತಂತ್ರ್ಯ ಗೊಳಿಸುವುದಕ್ಕಾಗಿ ಅಲ್ಲ. ಎಂಬುದಂತು ಸತ್ಯ. ಅಸಲಿಗೆ ವಿವಾದಾತ್ಮಕ ವ್ಯಕ್ತಿಯನ್ನು ಪಠ್ಯಮಾಡುವ ಹುಂಬು ಹಠ ವಿರೋಧಪಕ್ಷದವರಿಗೇಕೆ?

–ಶ್ರೀರಂಗ ಪುರಾಣಿಕ

## ಭಟ್ಟರ್ ಸ್ಕಾಚ್

● ರವಿ ಮುದೇನೂರು, ಬೆಂಗಳೂರು
ಗಲಭೆಕೋರರು ಠಾಣೆಗೆ ಬೆಂಕಿಯಿಡುತ್ತಿದ್ದರೆ ಪೊಲೀಸರು ಏನು ಮಾಡುತ್ತಿದ್ದರಂತೆ ?
**– ಅವರೂ ವರ್ಕ್ ಫ್ರಾಮ್ ಹೋಮ್ !**

● ಸುಮಂಗಲ ಆಚಾರ್ಯ, ಪದ್ಮನಾಭನಗರ
ಕೇಜಿಹಳ್ಳಿ, ಡಿಜಿಹಳ್ಳಿ ಗಲಭೆ ನೋಡ್ಕೊಂಡು ಕಾಂಗ್ರೆಸ್ ನಾಯಕರು ಸುಮ್ಮನಿದ್ದಾರಲ್ಲ ?
**– ಪಾಪ ಹುಡುಗರು ಸ್ವಲ್ಪ ತಮಾಷೆ ಮಾಡಿದ್ದಾರೆ ಅಂತ ಅಂದುಕೊಂಡಿದ್ದಾರಂತೆ !**

● ಸುಧಾಕರ ಶೆಟ್ಟಿ, ಚಾಮರಾಜಪೇಟೆ
ಬೆಂಗಳೂರು ಗಲಭೆ ಸಮಯದಲ್ಲಿ ಶಾಂತಿ ಕಾಪಾಡಿದವರು ಮುಸ್ಲಿಂ ಯುವಕರಂತೆ ಹೌದಾ ?
**– ಹಾಗಾದರೆ ಗಲಭೆ ಮಾಡಿದವರು ಯಾರಂತೆ, ಪಾಪ !**

● ರಾಜೀವ ಹೆಗಡೆ, ಯಲ್ಲಾಪುರ
ಇದು ರಾಜಾಹುಲಿ ಸರಕಾರ ಅಂದುಕೊಂಡಿದ್ದು ಸರಿಯಿದೆಯಾ ?
**– ಸರಿಯಿದೆ.. ಆದರೆ ಹುಲಿಯ ಉಗುರು ಉದುರಿದೆ, ಗಂಟಲು ಬಿದ್ದು ಹೋಗಿದೆ !**

● ಸಿದ್ದೇಶ ಪಾಟೀಲ, ಗೋಕಾಕ
ನಾವು ಕೆಳಗೆ ಬಿದ್ದಾಗ ನಮ್ಮ ಸಹಾಯಕ್ಕೆ ಯಾರೂ ಬರುವುದಿಲ್ಲವಲ್ಲ ?
**– ಹಾಗೆಲ್ಲ ಅನ್ನಬೇಡಿ, ಎದ್ದು ಪುನಃ ಎತ್ತರಕ್ಕೆ ಹೋದಾಗ ಅವರು ಬಂದೆ ಬರ್ತಾರಲ್ಲ ?!**

● ಭಾಗ್ಯ (ಇಮೇಲ್ ಮೂಲಕ)
ಭಟ್ರೇ, ನೀವು ಹಿಂದಿ ಪರ ಅಂತಾರಲ್ಲ ?
**– ಇಷ್ಟು ದಿನ ಹಿಂದೂ ಪರ ಅಂತಿದ್ರು.. ಮುಂದೇನು ಅಂತಾರೋ ?!**

● ಚಂದ್ರಶೇಖರ ಶರ್ಮ, ಮೈಸೂರು
ನೀವು ಎಲ್ಲ ರಾಜಕಾರಣಿಗಳ ಜತೆಗೆ ಒಳ್ಳೆಯ ಬಾಂಧವ್ಯ ಇಟ್ಟುಕೊಂಡಿದ್ದೀರಂತೆ ?
**– ಸಿನಿಮಾ ನಟಿಯರು ನಿನಗೆ ಏನು ಮಾಡಿದ್ದರು ?**

● ರೂಪಶ್ರೀ ಕೆ.ಗೌಡ, ಬೆಂಗಳೂರು
ಭಟ್ರೇ, ನೀವು ಮೋದಿ ಭಕ್ತರ ಸಾಲಿಗೆ ಸೇರುತ್ತೀರಾ ?
**– ಅವರನ್ನು ಮೀರಿಸುವ ನಾಯಕ ಪ್ರತಿಪಕ್ಷದಲ್ಲಿ ಇದ್ದರೆ ಹೇಳಿ, ಅವರ ಭಕ್ತರಾಗೋಣ !**

● ಶಿವನಹಳ್ಳಿ ಗಣಪತಿ, (ಇಮೇಲ್ ಮೂಲಕ)
ಸಾರ್, ಹೆಂಡತಿ ಮಾತನ್ನು ಕೇಳಬಾರದು ಅಂತಾರಲ್ಲ ?
**– ಯಾರ ಹೆಂಡತಿ ಮಾತನ್ನು ಕೇಳಬಾರದು ಎಂದು ಸರಿಯಾಗಿ ಹೇಳಬಾರದೇ?!**

● ಸತೀಶ ಗೌಡ, ಮಳವಳ್ಳಿ
ಭಟ್ರೇ, ನಿಮಗೆ ಯಾವ ಜಾತಿಯವರನ್ನು ಕಂಡರೆ ಆಗೊಲ್ಲ ?
**– ಮೂರ್ಖರು, ಮುಠ್ಠಾಳ ಜಾತಿಯವರನ್ನು ಕಂಡರೆ ಆಗೊಲ್ಲ !**

# ಸ್ವಾತಂತ್ರ್ಯದ ಹೆಸರಿನಲ್ಲಿ ಕುಕೃತ್ಯಗಳು ನಡೆಯದಿರಲಿ



ಅಭಿವ್ಯಕ್ತಿ

ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ
varasdyojatha2015@gmail.com

**ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬಡತನ, ಅನಕ್ಷರತೆ, ಕೋಮುವಾದ, ಜಾತೀಯತೆ, ಭ್ರಷ್ಟಾಚಾರದ ಸಮಸ್ಯೆಗಳು ಕಂಟಕ. ಅನೇಕರ ತ್ಯಾಗದ ಫಲವಾಗಿ ದೊರಕಿರುವ ಸ್ವಾತಂತ್ರ್ಯದ ಹೆಸರಿನಲ್ಲಿ ಇಂದು ನಡೆಯುತ್ತಿರುವ ಕೃತ್ಯಗಳು ದೇಶದ ಪ್ರಗತಿಗೆ ಮಾರಕವಾಗಿವೆ.**

ಸ್ವಾತಂತ್ರ್ಯ ಎಂಬ ಪದ ಕೇಳಿದರೆ ಸಾಕು ಪ್ರತಿಯೊಬ್ಬ ಭಾರತೀಯರ ರೋಮ ಪುಟಿದೇಳುತ್ತವೆ. ಸ್ವಾತಂತ್ರ್ಯ ಸಂಗ್ರಾಮವನ್ನು ನೆನಪಿಸಿಕೊಂಡರೆ ರಕ್ತ ಸಂಚಲನ ಇಮ್ಮಡಿಗೊಳ್ಳುತ್ತದೆ. ನೂರಾರು ವರ್ಷಗಳ ಕಾಲ ಬ್ರಿಟಿಷರ ದಾಸ್ಯಕ್ಕೆ ಒಳಗಾಗಿದ್ದ ಭಾರತಕ್ಕೆ ಸ್ವಾತಂತ್ರ್ಯ ಎಂಬ ಶಬ್ದ ಸರ್ವ ಶ್ರೇಷ್ಠವಾಗಿದೆ. ಮತ್ತೊಬ್ಬರ ಅಧೀನದಿಂದ ಮುಕ್ತಿ ಹೊಂದಿ, ನಮ್ಮ ನೆಲೆಯನ್ನು ಮತ್ತು ನಿಲುವುಗಳನ್ನು ತಾಳುವುದೇ ಸ್ವಾತಂತ್ರ್ಯವಾಗಿದೆ. ಭೂಮಂಡಲದ ಮೇಲಿರುವ ಸಕಲ ಚರಾಚರಗಳಿಗೂ ಸ್ವಾತಂತ್ರ್ಯ ಬೇಕೇ ಬೇಕು; ಇಲ್ಲದಿದ್ದರೆ ಉಸಿರಾಡುವುದಕ್ಕೂ ಭಾರವೆನಿಸುತ್ತದೆ. ದೇಶದ ಯಾವುದೇ ಮೂಲೆಯಲ್ಲೂ ಜೀವಿಸುವ ಸ್ವಾತಂತ್ರ್ಯ, ಬದುಕು ಕಟ್ಟಿಕೊಳ್ಳುವ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಶೈಕ್ಷಣಿಕ ಸ್ವಾತಂತ್ರ್ಯ, ಶೋಷಣೆ ಮತ್ತು ದಬ್ಬಾಳಿಕೆ ವಿರುದ್ಧ ಧ್ವನಿ ಎತ್ತುವ ಸ್ವಾತಂತ್ರ್ಯ ಅತ್ಯವಶ್ಯಕವಾಗಿದೆ.

ಹಾಡು ಹಕ್ಕಿಗೆ, ಹರಿಯುವ ನೀರಿಗೆ, ಹರಡುವ ಗಾಳಿಗೆ, ನಿರ್ಭೀತಿಯಿಂದ ಬದುಕಲು ಪ್ರಾಣಿಗಳಿಗೆ ಸ್ವಾತಂತ್ರ್ಯ ಬೇಕು. ಭಯ ಮಿಶ್ರಿತ ವಾತಾವರಣದಿಂದ ದೂರವಿರಲು ಮನುಷ್ಯನಿಗೆ ಸ್ವಾತಂತ್ರ್ಯ ಬೇಕು. ಆಂಗ್ಲರ ನೀಚ ವರ್ಣಬೇಧ ನೀತಿ, ದಬ್ಬಾಳಿಕೆ, ತುಳಿತ, ಶೋಷಣೆ, ಅನ್ಯಾಯ, ದಾಳಿ ಮತ್ತು ಧರ್ಮದ ಹೇರಿಕೆ ಮುಂತಾದವುಗಳು ಭಾರತವೆಂಬ ಸಿರಿಯನ್ನು ಚಿವುಟಿ ಹಾಕಿದವು; ಆ ಗಿಡ ತಕ್ಷಣ ಹೇಗೆ ತಾನೇ ಬೆಳೆಯಲು ಸಾಧ್ಯ. ವ್ಯಾಪಾರವೆಂಬ ಕುಂಟು ನೆಪವೊಡ್ಡಿ ಭಾರತಕ್ಕೆ ಬಂದ ಆಂಗ್ಲರು, ತಮ್ಮ ಬೇರುಗಳನ್ನು ದಿನದಿಂದ ದಿನಕ್ಕೆ ಚಾಚುತ್ತಾ, ತಮ್ಮ ನೆಲೆಯನ್ನು ಭದ್ರಪಡಿಕೊಂಡು ಗಟ್ಟಿಯಾಗಿ ನೆಲೆಯೂರಿದರು. ನಮ್ಮ ದೇಶದ ಕೆಲವು ಪಂಗಡಗಳಿಗೆ ಪ್ರೋತ್ಸಾಹ ನೀಡಿ, ಅವರನ್ನು ಬಲಪಡಿಸಿಕೊಳ್ಳುತ್ತ ತಮ್ಮ ತೋಳ್ಬಲವನ್ನು ವೃದ್ಧಿಸಿಕೊಂಡರು. ಪ್ರಗತಿ ಮತ್ತು ದೇಶದ ಅಖಂಡತೆ ಪರವಾಗಿ ಹೋರಾಟ ಮಾಡುವವರನ್ನು ಹಿಂಸಿಸಿ ತಮ್ಮ ಸಾಮ್ರಾಜ್ಯವನ್ನು ಭಾರತಾಂಬೆಯ ನೆಲದಲ್ಲಿ ಕಟ್ಟಲು ಅಡಿಗಲ್ಲು ಹಾಕಿದರು.

16ನೇ ಶತಮಾನದ ಆರಂಭದಲ್ಲಿ ಬೆಕ್ಕಿನ ನಡಿಗೆಯನ್ನಿಟ್ಟು ಮದ್ರಾಸ್ ಪ್ರವೇಶಿಸಿದ ಆಂಗ್ಲರು 17ನೇ ಶತಮಾನದ ಆರಂಭಕ್ಕೆ ತಮ್ಮ ಹೆಜ್ಜೆಗಳನ್ನು ಭದ್ರಪಡಿಸಿಕೊಂಡು ಸಮುದ್ರ ತೀರದಲ್ಲಿ ಕೋಟೆಗಳ ನಿರ್ಮಾಣಕ್ಕೆ ಮುನ್ನುಡಿ ಬರೆದರು. 1757ರ ಪ್ಲಾಸಿ ಕದನದ ನಂತರ ಬಿಹಾರ, ಒರಿಸ್ಸಾ ಮತ್ತು ಪೂರ್ವತೀರದ ಪ್ರದೇಶಗಳು ಸಾಲು ಸಾಲಾಗಿ ಬ್ರಿಟಿಷರ ತೆಕ್ಕೆಗೆ ಬಿದ್ದವು. ಅಲ್ಲಿನ ಎಲ್ಲ ಸಂಪತ್ತು ಇಂಗ್ಲೆಂಡ್‌ನ ತಿಜೋರಿಗೆ ರವಾನೆಯಾಗಿತ್ತು, ಇತ್ತ ಆ ಪ್ರದೇಶದ ಜನರು ಉದ್ಯೋಗ ಮತ್ತು ಹಸಿನಿಂದ ಬಳಲಿ ಪ್ರಾಣ ಬಿಟ್ಟಿದ್ದರು. ಆಂಗ್ಲರ ವಿರುದ್ಧ ಹೋರಾಟ ಮಾಡುವ ಶಕ್ತಿಯಾಗಲಿ, ಅಖಂಡತೆಯಾಗಲಿ, ಒಗ್ಗಟ್ಟಾಗಲಿ ನಮ್ಮಲ್ಲಿರಲಿಲ್ಲ. ಅಲ್ಲಿಂದ ಆರಂಭವಾದುದು ಪರತಂತ್ರ ಮತು ಅಧೀನತೆ !

ಕೃಷಿ ಪ್ರಧಾನವಾದ ದೇಶದಲ್ಲಿ ಕಂದಾಯ ವಸೂಲಿಯೆಂಬ ಅನಿಷ್ಟ ಪದ್ಧತಿಯನ್ನು ಜಾರಿಗೆ ತಂದು, ರೈತರ ಬೆನ್ನೆಲುಬಿಗೆ ಹೊಡೆತ ಕೊಟ್ಟರು. ಲೂಟಿ ಹೊಡೆದ ಸಂಪತ್ತಿನಿಂದ ಕೈಗಾರಿಕಾ ಕ್ರಾಂತಿಗೆ ಮುನ್ನುಡಿ ಬರೆದರು. ಈಸ್ಟ್ ಇಂಡಿಯಾ ಕಂಪನಿಯ ಮುಖಾಂತರ ನಮ್ಮ ದೇಶದಲ್ಲಿ ಹೇರಳವಾಗಿ ದೊರೆಯುವ ಕೈಗಾರಿಕಾ ವಸ್ತುಗಳು, ಕೃಷಿ ಉತ್ಪನ್ನಗಳನ್ನು ಇಂಗ್ಲೆಂಡ್‌ಗೆ ಸಾಗಿಸಿ ತಮ್ಮ ಬೊಕ್ಕಸವನ್ನು ತುಂಬಿಸಿಕೊಂಡರು.

ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ನಮ್ಮ ವಸ್ತುಗಳು ಸಿದ್ಧ ವಸ್ತುಗಳಾಗಿ ಪುನಃ ಭಾರತಕ್ಕೆ ಬಂದವು; ಇತ್ತ ದೇಶದಲ್ಲಿ ನೇಕಾರಿಕೆ, ಕುಶಲ ಕಾರ್ಮಿಕರು, ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು ಆಂಗ್ಲರ ಆಧುನಿಕ ಯಂತ್ರಗಳ ಎದುರು ನಿಲ್ಲಲಾಗದೆ ಉದ್ಯೋಗವನ್ನು ಕಳೆದುಕೊಂಡು ನಿರುದ್ಯೋಗಿಗಳಾದರು.

19ನೇ ಶತಮಾನದ ಹೊತ್ತಿಗೆ ಹಡಗು, ಲೋಹ, ಗಾಜು ಮತ್ತು ಕಾಗದ ಕೈಗಾರಿಕೆಗಳು ಲಗ್ಗೆ ಇಟ್ಟಿದ್ದವು. ಸುಮಾರು ನೂರು ವರುಷಗಳ ಆಂಗ್ಲರ ಆಳ್ವಿಕೆಗೆ ಭಾರತ ನಲುಗಿ ಹೋಗಿತ್ತು. ಸಹಾಯಕ ಸೈನ್ಯ ಪದ್ಧತಿ, ದತ್ತು ಮಕ್ಕಳಿಗೆ ಹಕ್ಕಿಲ್ಲ, ಜಮೀನ್ದಾರಿ ಪದ್ಧತಿ, ಉನ್ನತ ಹುದ್ದೆಗಳಿಗೆ ಭಾರತೀಯರಿಗೆ ನಿರಾಕರಣೆ, ರಾಜ ಮನೆತನಗಳ ವಿಲೀನೀಕರಣ, ಮಿತಿಮೀರಿದ ಕಂದಾಯ ವಸೂಲಿ, ಕೈಗಾರಿಕಾ ಕ್ರಾಂತಿಯ ಪೆಟ್ಟು, ಸೈನಿಕ ಕಾರಣಗಳು ಮತ್ತು ಮಿಷನರಿಗಳ ಮತಾಂತರ ಪ್ರಕ್ರಿಯೆಯಿಂದ ಭಾರತೀಯರು ರೋಸಿ ಹೋಗಿದ್ದರು. ಮಿತಿಮೀರಿದ ದಬ್ಬಾಳಿಕೆಯ ವಿರುದ್ಧ ಮಂಗಲ್ ಪಾಂಡೆ ಸ್ವಾತಂತ್ರ್ಯದ ಕಿಡಿಯನ್ನು ಮೊದಲ ಬಾರಿ ಹೊತ್ತಿಸಿದನು. ಇದನ್ನ ಕೆಲವರು ಸಿಪಾಯಿ ದಂಗೆ ಎಂದು ಕರೆದರು. ಇನ್ನೂ ಕೆಲವರು ಇದನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಬಣ್ಣಿಸಿದರು.

ಆರಂಭದಲ್ಲಿ ಈ ಹೋರಾಟಕ್ಕೆ ಅಷ್ಟು ಯಶಸ್ಸು ಸಿಗಲಿಲ್ಲ, ಕ್ರಮೇಣ ಸ್ವಾತಂತ್ರ್ಯದ ಅಗತ್ಯತೆ ಮತ್ತು ಅನಿವಾರ್ಯತೆಯಿಂದ ಸ್ವಾತಂತ್ರ್ಯದ ಕೂಗು ಮತ್ತಷ್ಟು ದೀರ್ಘವಾಯಿತು. ಹೋರಾಟದ ಕಿಡಿ ದೇಶದ ತುಂಬೆಲ್ಲಾ ಹೊತ್ತಿತು. ಮಂದಗಾಯಿಗಳು ಅಹಿಂಸಾ ಮಾರ್ಗವನ್ನು ಮತ್ತು ತೀವ್ರಗಾಯಿಗಳು ಹಿಂಸಾ ಮಾರ್ಗವನ್ನು ಅನುಸರಿದರೂ, ಇಬ್ಬರ ಗುರಿ ಒಂದೇ ಇತ್ತು. ಅದೇ ಗುಲಾಮಗಿರಿಯಿಂದ ಬಿಡುಗಡೆ ಹೊಂದುವುದು. ಬಾಲ ಗಂಗಾಧರ್ ತಿಲಕ್, ಮಹಾತ್ಮಾ ಗಾಂಧಿ, ಸರ್ದಾರ್ ವಲ್ಲಭಭಾಯ್ ಪಟೇಲ್, ಜವಾಹರ್ ಲಾಲ್ ನೆಹರು, ಸುಭಾಶ್ ಚಂದ್ರ ಭೋಸ್, ಚಂದ್ರಶೇಖರ ಅಜಾದ್, ಭಗತ್ ಸಿಂಗ್, ಝೂನ್ಸಿರಾಣಿ ಲಕ್ಷ್ಮೀಬಾಯಿ, ಬಿಪಿನ್ ಚಂದ್ರಪಾಲ್, ಸುಖದೇವ್, ರಾಜಗುರು, ಬಂಕಿಮ್ ಚಂದ್ರ ಚಟರ್ಜಿ ಮುಂತಾದ ಅಸಂಖ್ಯಾತ ಹೋರಾಟಗಾರರ ಅವಿರತ ಚಳವಳಿ, ದಂಗೆ, ತ್ಯಾಗ, ಬಲಿದಾನದ ಪ್ರತಿಫಲವಾಗಿ ಭಾರತ 1947 ಆಗಸ್ಟ್ 15ರಂದು ಭಾರತ ಮಾತೆಗೆ ಆಂಗ್ಲರ ದಾಸ್ಯದಿಂದ ಮುಕ್ತಿ ದೊರೆಯಿತು.

565 ಸಂಸ್ಥಾನಗಳ ವಿಲೀನಿಕರಣದ ಜವಾಬ್ದಾರಿ ಸರ್ದಾರ್ ವಲ್ಲಭ ಬಾಯ್ ಪಟೇಲರ ಹೆಗಲೇರಿದಾಗ, ಅದನ್ನು ಯಶಸ್ವಿಯಾಗಿ ನಿರ್ವಹಿಸಿ ಉಕ್ಕಿನ ಮನುಷ್ಯ ಎಂದೆನಿಸಿಕೊಂಡರು. ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾದ ಬಾಬಾ ಸಾಹೇಬ್



ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರಪಂಚದ ಅತೀ ದೊಡ್ಡ ಸಂವಿಧಾನವನ್ನು ಕೊಡುಗೆಯಾಗಿ ನೀಡಿ ಸಂವಿಧಾನ ಶಿಲ್ಪಿಯಾದರು. 26ನೇ ಜನವರಿ 1950 ಭಾರತ ಗಣರಾಜ್ಯವಾಗಿ, ಅತೀ ದೊಡ್ಡ ಪ್ರಜಾಪ್ರಭುತ್ವವಾಗಿ ಹೊರಹೊಮ್ಮಿತು. ಭಾಷಾವಾರು ಪ್ರಾಂತ್ಯಗಳ ಅಭ್ಯುದಯಕ್ಕೆ ನಾಂದಿಹಾಡಿತು.

ಸ್ವಾತಂತ್ರ್ಯೋತ್ತರ ಭಾರತವು ಪ್ರಾರಂಭದಲ್ಲಿ ಬಡತನ, ಅನಕ್ಷರತೆ, ಕೋಮು, ಜಾತೀಯತೆ, ಭ್ರಷ್ಟಾಚಾರ ಮುಂತಾದ ಸಾಲು – ಸಾಲು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಈ ಸಮಸ್ಯೆಗಳಿಂದ ಪೂರ್ಣ ಪ್ರಮಾಣದಲ್ಲಿ ಆಗದಿದ್ದರೂ ಶಿಕ್ಷಣ, ಕೃಷಿ, ಕೈಗಾರಿಕೆ, ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಗಮನಾರ್ಹ ಪ್ರಗತಿ ಹೊಂದಿದ್ದೇವೆ. ಅನೇಕರ ತ್ಯಾಗದ ಫಲವಾಗಿ ದೊರಕಿರುವ ಸ್ವಾತಂತ್ರ್ಯದ ಹೆಸರಿನಲ್ಲಿ ಇಂದು ನಡೆಯುತ್ತಿರುವ ಕೃತ್ಯಗಳು ದೇಶದ ಪ್ರಗತಿಗೆ ಮಾರಕವಾಗಿವೆ. ಭಯೋತ್ಪಾದನೆ ಹಿಮ್ಮೆಟ್ಟಿಸಿ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿರುವ ನಾವುಗಳು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಕಂಡು ಪರದೇಶದವರು ಹುಬ್ಬೇರಿಸುವಂತೆ ಎಲ್ಲಾ ರಂಗಗಳಲ್ಲೂ ಬೆಳೆದು ನಿಲ್ಲಬೇಕಿದೆ.

ಈ 74ನೇ ವರ್ಷದ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಹೋರಾಟಗಾರರನ್ನು ಸ್ಮರಿಸಿಕೊಳ್ಳುತ್ತಾ, ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಸ್ವಾತಂತ್ರ್ಯ ದಿನವನ್ನು ಆಚರಿಸೋಣ.